ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ    ದಿನಾಂಕ : DATE: 19/12/2019

# ಡಿಪಿಎಆರ್‌ನಿಂದ 7 ತಿಂಗಳು ಸಂಬಳ ಪಡೆದ ಅಪರಿಚಿತ ಪಿಎ

■ ವಿಕ ಸುದ್ದಿಲೋಕ ಬೆಂಗಳೂರು 19/12

ವಿಧಾನ ಪರಿಷತ್ ಸದಸ್ಯ ಕೆ.ಪಿ ನಂಜುಂಡಿ ಅವರ ಆಪ್ತ ಕಾರ್ಯದರ್ಶಿಯಾಗಿರುವೆನೆಂದು ಅಪರಿಚಿತ ವ್ಯಕ್ತಿಯೊಬ್ಬ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಿಂದ (ಡಿಪಿಎಆರ್) 7 ತಿಂಗಳ ವೇತನ ಪಡೆದುಕೊಂಡು ಮೋಸ ಮಾಡಿದ್ದಾನೆ.

## ಎಮ್ಮೆಲ್ಸಿ ಕೆ.ಪಿ ನಂಜುಂಡಿ ಪಿಎ ಎಂದು ಬಿಲ್ ಡ್ರಾ

ನಂಜುಂಡಿ ಅವರ ಲೆಟರ್ ಹೆಡ್ ಹಾಗೂ ಅವರ ಹೆಸರಿನ ನಕಲಿ ಸಹಿ ಮಾಡಿ 2 ಲಕ್ಷ ರೂ.ಗೂ ಅಧಿಕ ಸಂಬಳವನ್ನು ಡಿಪಿಎಆರ್‌ನಿಂದ ಪಡೆದುಕೊಂಡಿದ್ದಾನೆ. ಈ ಕುರಿತು ಡಿಪಿಎಆರ್‌ನ ಸಿಬ್ಬಂದಿ ನಂಜುಂಡಿ ಅವರಿಗೆ ಪತ್ರ ಬರೆದು ಮಾಹಿತಿ ನೀಡಿದ್ದಾರೆ. ಆದರೆ, ಆ ಹೆಸರಿನ ವ್ಯಕ್ತಿ ಕೆಲಸ ಮಾಡಿಲ್ಲವೆಂದು ತಿಳಿದ ನಂಜುಂಡಿ ಅವರು ವಿಧಾನಸೌಧ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ತುಮಕೂರು ಜಿಲ್ಲೆ ಕುಣಿಗಲ್ ತಾಲೂಕಿನ ರವಿಕುಮಾರ್ ಎಂಬುವರ ಹೆಸರಿನಲ್ಲಿ ವೇತನ ಪಡೆಯಲಾಗಿದ್ದು, ಈ ಸಂಬಂಧ ಎಫ್‌ಐಆರ್ ದಾಖಲಿಸಿಕೊಂಡಿರುವ ವಿಧಾನಸೌಧ ಪೊಲೀಸರು, ತನಿಖೆ ಕೈಗೊಂಡಿದ್ದಾರೆ.

''ವೇತನ ಬಿಡುಗಡೆ ಮಾಡುವಾಗ ಡಿಪಿಎಆರ್ ಸಿಬ್ಬಂದಿ ನನ್ನ ಕಚೇರಿಯನ್ನು ಸಂಪರ್ಕಿಸಿ ವಿಚಾರಣೆ ಮಾಡಬಹುದಿತ್ತು. ಆದರೆ, ಆ ಕೆಲಸ ಮಾಡಿಲ್ಲ. ಅದಕ್ಕಿಂತ ಹೆಚ್ಚಾಗಿ ಏಳು ತಿಂಗಳಿಂದ ವೇತನ ಇಲ್ಲದೇ ಕೆಲಸ ಮಾಡಿದವರು ಯಾರು ಎಂಬುದು ಕೂಡ ಪ್ರಶ್ನಾರ್ಥಕವಾಗಿದೆ.

ವೇತನ ಬಿಡುಗಡೆ ಮಾಡಿದ ನಂತರ ಡಿಪಿಎಆರ್‌ನವರು ನನ್ನ ಕಚೇರಿಗೆ ಪತ್ರ ಕಳುಹಿಸಿರುವುದರ ಉದ್ದೇಶವೂ ಅರ್ಥವಾಗಿಲ್ಲ. ಈ ಸಂಬಂಧ ತನಿಖೆಯಾಗಲಿ ಎಂದು ಠಾಣೆಗೆ ದೂರು ನೀಡಿದ್ದೇನೆ'' 'ಎಂದು ಅವರು ಹೇಳಿದರು.

2